ಅಲ್ಲೊ ನಮ್ಮ ಕೂಗಾಟದ ರಾಜಕೀಯದ ನಾಟಕ!'

ಮುಂದುವರಿದು ಅವರು ಈ ಕೂಗಾಟದ ರಾಜಕೀಯ ನಾಟಕ, ಬೂಟಾಟದ ರಾಜಕೀಯ ನಾಟಕವಲ್ಲವೆಂದೂ, ನಮ್ಮ ನಾಲ್ಕು ದಿನದ ರಾಜಕೀಯ ನಾಟಕವಲ್ಲವೆಂದೂ, ಕೀರ್ತಿಶನಿಯ ರಾಜಕೀಯ ನಾಟಕವಲ್ಲವೆಂದೂ ಉದ್ಗರಿಸಿದರು. ಈ 'ಅಖಂಡ ಕರ್ನಾಟಕ ಸರಸ್ವತಿಯೆ ರಚಿಸಿದ ಒಂದು ಅರಾಜಕೀಯ ತ್ರೋಟಕ' ಎಂದು ಅವರು ಸಾರಿದರು.

'ನೃಪತುಂಗನೆ ಚಕ್ರವರ್ತಿ!
ಪಂಪನಲ್ಲಿ ಮುಖ್ಯಮಂತ್ರಿ!
ರನ್ನ ಜನ್ನ ನಾಗವರ್ಮ
ರಾಘವಾಂಕ ಹರಿ ಹರ
ಬಸವೇಶ್ವರ ನಾರಣಪ್ಪ
ಸರ್ವಜ್ಞ ಷಡಕ್ಷರ
ಸರಸ್ವತಿಯೆ ರಚಿಸಿದೊಂದು
ನಿತ್ಯ ಸಚಿವ ಮಂಡಲ
ತನಗೆ ರುಚಿರ ಕುಂಡಲ!'

ಎಂಬ ಮಾತುಗಳಲ್ಲಿ ಕವಿ ಕರ್ನಾಟಕ ಎಂದರೆ ಕನ್ನಡಮಯವಾದದ್ದು ಎಂದು ಧ್ವನಿಸಿದರು. ಕರ್ನಾಟಕ ಎಂದರೆ ಕನ್ನಡನಾಡು; ಕನ್ನಡ ಅಲ್ಲಿ ಸಿಂಹಾಸನ ಏರಿರುತ್ತದೆ ಎಂಬುದನ್ನು ಸೂಚಿಸಿದರು. ಇದು ಭಾಷಾನುಗುಣ ಪ್ರಾಂತ ರಚನೆಯ ಮೂಲ ಕಾರಣವಾಗಿತ್ತು. ಪ್ರತಿ ಪ್ರಾಂತದಲ್ಲಿಯೂ ಅಲ್ಲಿನ ಭಾಷೆಯೇ ಪ್ರಥಮ, ಪ್ರಧಾನ. ಪ್ರಜಾಪ್ರಭುತ್ವ ಪದ್ಧತಿಯನ್ನು ಒಪ್ಪಿಕೊಂಡ ಜನ ತಮ್ಮ ಸುಖ ದುಃಖಗಳನ್ನು ತಮ್ಮ ಭಾಷೆಗಳಲ್ಲಿಯೇ ಕಂಡುಕೊಳ್ಳುವುದು ಅವಶ್ಯವಾಗಿತ್ತು. ಆಡಳಿತದ ದಾಸ್ಯದಿಂದ, ಆಲೋಚನೆಯ ದಾಸ್ಯದಿಂದ, ತಿಳಿವಳಿಕೆಯ ದಾಸ್ಯದಿಂದ ಮುಕ್ತರಾಗುವುದು ರಾಜಕೀಯದಾಸ್ಯದಿಂದ ಮುಕ್ತರಾಗುವಷ್ಟೇ ಅಗತ್ಯವಾಗಿತ್ತು.

ಈ ಹೆಬ್ಬಯಕೆಯಿಂದ ಕನ್ನಡನಾಡು ಒಂದಾಗಿ ಈಗ ಇಪ್ಪತ್ತೈದು ವರ್ಷಗಳಾಗಿವೆ. ನಾಡು ಈ ಮಹಾ ಸಂದರ್ಭದ ಬೆಳ್ಳಿಯುತ್ಸವಕ್ಕೆ ಸಜ್ಜಾಗಿದೆ. ಕನಸು ನನಸಾಗಿ ಕಾಲು ಶತಮಾನ ಕಳೆದಿರುವ

'ಮಯೂರ'ದ 48 ವರ್ಷಗಳ ಸುದೀರ್ಘ ಪಯಣದಲ್ಲಿ ಕನ್ನಡದ ಸಿದ್ಧಪ್ರಸಿದ್ಧರು ಜೊತೆಯಾಗಿದ್ದಾರೆ. ಈ ನವಿಲಿನ ನಡಿಗೆಯಲ್ಲಿ ಕಂಡ ಮೋಹಕ 'ನವಿಲುಗರಿ'ಗಳನ್ನು ಒಂದೊಂದಾಗಿ ಹೆಕ್ಕಿ ಈ ಅಂಕಣ ಮುಂದಿಡುತ್ತದೆ. ಈ ನವಿಲುಗರಿಗಳು ಹಲವು ಓದುಗರ ನೆನಪುಗಳನ್ನು ಮಧುರವಾಗಿ ನೇವರಿಸುವುದಲ್ಲದೇ ಹೊಸ ಓದುಗರಿಗೆ ಹಳೆಯ ಬರಹಗಳ ಅಂದವನ್ನು ಪರಿಚಯಿಸುತ್ತವೆ. ಇದು, 1981ರ ನವೆಂಬರ್ ತಿಂಗಳ ಸಂಚಿಕೆಯಿಂದ ಆಯ್ದ ಬರಹ.